ಗ್ರಾಮದಲ್ಲಿ ಒಂದು 33:11 ಕೆ.ವಿ ಉಪ ಕೇಂದ್ರವನ್ನು ಸ್ಥಾಪಿಸಲು ನಿಗಮದ ತಾಂತ್ರಿಕ ಸಮಿತಿಯ ಒಪ್ಪಿಗೆ ದೊರೆತಿದೆ. ಹಳ್ಳೂರು ಗ್ರಾಮದಲ್ಲಿ ಈಗಾಗಲೇ ಉಪ ಕೇಂದ್ರದ ಕೆಲಸ ಪ್ರಾರಂಭವಾಗಿದೆ. ಚಿಕ್ಕೇರೂರು, ಕೋಡ, ಮಾಸೂರು ಉಪ ಕೇಂದ್ರಗಳ ಸ್ಥಾಪನೆಗಳಿಗಾಗಿ ಭೂಮಿಯನ್ನು ಗುರುತಿಸಲಾಗಿ ಪಶಕ್ಕೆ ತೆಗೆದುಕೊಳ್ಳುವ ಕಾರ್ಯ ಪ್ರಗತಿಯಲ್ಲಿದೆ.

ಇ. ಈ ಗ್ರಾಮಗಳಲ್ಲಿ ಸ್ಥಾಪಿಸಲ್ಪಡುವ ಉಪ ಕೇಂದ್ರಗಳ ಮತ್ತು ವಿದ್ಯುತ್ ಮಾರ್ಗಗಳ ಅಂದಾಜು ಮೊತ್ತ ಈ ಕೆಳಗಿನಂತಿದೆ.

1. ಹಳ್ಳೂರು ರೂ.215.00 ಲಕ್ಷಗಳು
2. ಚಿಕ್ಕೇರೂರು ರೂ.200.00 ಲಕ್ಷಗಳು
3. ಕೋಡ ರೂ.225.00 ಲಕ್ಷಗಳು
4. ಮಾಸೂರು ರೂ.200.00 ಲಕ್ಷಗಳು

ಈ ಮತ್ತು ಉ. ಹಳ್ಳೂರು ಗ್ರಾಮದಲ್ಲಿ ಉಪ ಕೇಂದ್ರದ ಕೆಲಸಗಳು ಈಗಾಗಲೇ ಪ್ರಾರಂಭಿಸಲಾಗಿದೆ. ಮಿಕ್ಕ ಮೂರು ಉಪ ಕೇಂದ್ರಗಳ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರೆತು ಆರ್ಥಿಕ ವ್ಯವಸ್ಥೆ ಆದ ನಂತರ ಕೆಲಸ ಪ್ರಾರಂಭಿಸಲಾಗುವುದು.

ಸೀನಿಯರ್ ಡಿವಿಜನ್ ಜಡ್ಜ್ ನ್ಯಾಯಾಲಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 906(1251)

ಸದಸ್ಯರ ಹೆಸರು: ಶ್ರೀ ಬನ್ನಿಕೋಡ್ ಬಿ.ಹೆಚ್.(ಹಿರೇಕೆರೂರು)

ಪ್ರಶ್ನೆ

ಅ) ಹಾವೇರಿ ಜಿಲ್ಲಾ ಹಿರೇಕೆರೂರು ತಾಲ್ಲೂಕಿನಲ್ಲಿ ಸೀನಿಯರ್ ಡಿವಿಜನ್ ಸಿವಿಲ್ ಜಡ್ಜ್ ನ್ಯಾಯಾಲಯ ಹೊಸದಾಗಿ ಸ್ಥಾಪಿಸಲು ಸಾರ್ವಜನಿಕರು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದಯೇ?

ಆ) ಬಾಣಿಬೆನ್ನೂರು ಸೀನಿಯರ್ ಡಿವಿಜನ್ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಬಾಕಿ ಇರುವ ಮೊಕದ್ದಮೆಗಳ ವಿವರ ನೀಡುವುದು?

ಇ) ಹಿರೇಕೆರೂರಿನಲ್ಲಿ ಇರುವ ನ್ಯಾಯಾಲಯ ಕಟ್ಟಡದಲ್ಲಿ ಹೊಸ ಸೀನಿಯರ್ ಡಿವಿಜನ್

ಸಿವಿಲ್ ಜಡ್ಜ್ ನ್ಯಾಯಾಲಯಕ್ಕೆ ಸ್ಥಳಾವಕಾಶ ಇದೆಯೇ?

ಈ) ಹಿರೇಕೆರೂರು ತಾಲ್ಲೂಕಿನ ಸಂಪೂರ್ಣ ಗ್ರಾಮೀಣ ಪ್ರದೇಶದ ಜನತೆಗೆ ಜನರ ಬಾಗಿಲಿಗೆ ನ್ಯಾಯದಾನದ ನೀತಿ ಅನುಸರಿಸಿ ಹೊಸ ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ನೀತಿ ಹಾಗೂ ಕ್ರಮಗಳೇನು?

ಉತ್ತರಿಸುವ ಸಚಿವರು: ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಉತ್ತರ

ಅ) ಹೌದು. ಈ ವಿಷಯವು ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ.

ಆ) ದಿನಾಂಕ:1-1-2002ಕ್ಕೆ ರಾಣೆಬೆನ್ನೂರು ಸಿವಿಲ್ ಜಡ್ಜ್(ಹಿರಿಯ ವಿಭಾಗ) ಮತ್ತು ಪ್ರಿನ್ಸಿಪಾಲ್ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಈ ಕೆಳಕಂಡಂತೆ ಪ್ರಕರಣಗಳು ಬಾಕಿ ಇರುತ್ತವೆ.

ಸಿವಿಲ್ ಪ್ರಕರಣಗಳು	-	4068
ಕ್ರಿಮಿನಲ್ ಪ್ರಕರಣಗಳು	-	337
	-	4405

ಇ) ಜಿಲ್ಲಾ ನ್ಯಾಯಾಧೀಶರಿಂದ ಮಾಹಿತಿಯನ್ನು ಕಾಯಲಾಗುತ್ತಿದೆ.

ಈ) ಹಿರೇಕೆರೂರಿನಲ್ಲಿ ಸಿವಿಲ್ ಜಡ್ಜ್(ಹಿ.ವಿ.) ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿನ ಸಮಿತಿಯು ತೀರ್ಮಾನಿಸುವುದು. ಈ ಬಗ್ಗೆ ಜಿಲ್ಲಾ ನ್ಯಾಯಾಧೀಶರು ಹಾವೇರಿ ಇವರಿಂದ ಅವಶ್ಯವಾದ ಮಾಹಿತಿಯನ್ನು ಕೋರಲಾಗಿದ್ದು, ನ್ಯಾಯಾಲಯವನ್ನು ಸ್ಥಾಪಿಸಲು ಅವಶ್ಯವಾದ ಮಾಹಿತಿಗಳು ತೃಪ್ತಿಕರವಾಗಿದ್ದಲ್ಲಿ ನ್ಯಾಯಾಲಯವನ್ನು ಸ್ಥಾಪಿಸಲು ಸರ್ಕಾರಕ್ಕೆ ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಹಿರೇಕೆರೂರು ತಾಲ್ಲೂಕಿನ ರಟ್ಟಿಹಳ್ಳಿ ಗ್ರಾಮದ ಬಸ್ ನಿಲ್ದಾಣದ ಕಟ್ಟಡ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 908(1249)